ಗೇಣಿದಾರರಿಗೆ ಹೊಸದಾಗಿ ಪಡಿತರ ಚೀಟಿಗಳನ್ನು ನೀಡುವುದರ ಬಗ್ಗೆ

1394. ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

1) ಗೇಣಿದಾರರಿಗೆ ಹೊಸದಾಗಿ ಪಡಿತರ ಚೀಟಿಗಳನ್ನು ನೀಡುವಾಗ ಆಯಾ ಜಮೀನುದಾರರ ಪಡಿತರ ಚೀಟಿಗಳನ್ನು ಸಲ್ಲಿಸಲು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು ಒತ್ತಾಯಿಸುತ್ತಿದೆ ಎಂಬುದರ ಬಗೆಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?
2) ಸಾಮಾನ್ಯವಾಗಿ ಎಲ್ಲಾ ಗೇಣಿದಾರರು ಜಮೀನುದಾರರೊಂದಿಗೆ ಭಾಂದವ್ಯ ಅಷ್ಟೊಂದು ಚೆನ್ನಾಗಿಲ್ಲದಿರುವುದರಿಂದಾಗಿ ಗೇಣಿದಾರರಿಗೆ ಜಮೀನುದಾರರ ಪಡಿತರ ಚೀಟಿಗಳನ್ನು ಪಡೆಯುವುದು ಅಸಾಧ್ಯವಾಗುವುದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?
3) ಹಾಗಿದ್ದಲ್ಲಿ ಈ ಸಂಬಂಧದಲ್ಲಿ ಸರ್ಕಾರ ಕೈಗೊಂಡ ಕ್ರಮಗಳಾವುವು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) –

1) ಗೇಣಿದಾರರಿಗೆ ಪಡಿತರ ಚೀಟಿ ನೀಡುವಾಗ ಜಮೀನುದಾರರ ಪಡಿತರ ಚೀಟಿಗಳನ್ನು ಸಲ್ಲಿಸಲು ಒತ್ತಾಯಿಸಿಲ್ಲ. ಗೇಣಿದಾರರ ವಾಸ್ತವ್ಯದ ಬಗೆಗೆ ಬಾಡಿಗೆ ಸಂದ ರಸೀದಿಯನ್ನು ಸಲ್ಲಿಸಲು ಕೋರಲಾಗುತ್ತಿದೆ. ಒಂದು ವೇಳೆ ಬಾಡಿಗೆ ಸಂದ ರಸೀದಿಯನ್ನು ಸಲ್ಲಿಸಲಾಗದಿದ್ದಲ್ಲಿ ಬೇರೆ ದಾಖಲೆಗಳನ್ನು ನೀಡಬಹುದಾಗಿದೆ.
2) ಉದ್ಭವಿಸುವುದಿಲ್ಲ
3) ಉದ್ಭವಿಸುವುದಿಲ್ಲ

ನೇಯ್ಗೆಯಲ್ಲಿ ಆಧುನಿಕ ವೈಜ್ಞಾನಿಕ ತರಬೇತಿ

1396. ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) :– ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ನೇಯ್ಗೆಯಲ್ಲಿ ಆಧುನಿಕ ವೈಜ್ಞಾನಿಕ ತರಬೇತಿ ನೀಡುವಂತೆ ಸೂಕ್ತ ತಾಂತ್ರಿಕ ತರಬೇತಿ ಸಂಸ್ಥೆಯನ್ನು ಸ್ಥಾಪಿಸುವಂತೆ ಕೋರಿ ಅಖಿಲ ಕರ್ನಾಟಕ ದೇವಾಂಗ ಯುವಕ ವೇದಿಕೆಯವರು ಸಲ್ಲಿಸಿದ್ದ ಮನವಿಯ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮವೇನು?
ಆ) ಈ ಬೇಡಿಕೆಯನ್ನು ನೆರವೇರಿಸುವುದರಿಂದ ವೃತ್ತಿಯನ್ನು ಆಧುನೀಕರಿಸಿಕೊಂಡು, ಅಂತರಾಷ್ಟ್ರೀಯ ಮಟ್ಟಕ್ಕೇರಿಸಲು ಸಹಾಯಕವಾಗುವುದರಿಂದ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) –

ಅ) ಅಂತಹ ಮನವಿ ಶಿಕ್ಷಣ ಇಲಾಖೆಯ ಮುಂದಿರುವುದಿಲ್ಲ.
ಆ) ಉದ್ಭವಿಸುವುದಿಲ್ಲ

ಶಾಲಾ ವಿದ್ಯಾರ್ಥಿಗಳಿಗೆ ಶೌಚಾಲಯದ ವ್ಯವಸ್ಥೆ

1409. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :– ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ದಕ್ಷಿಣ ಕನ್ನಡ ಜಿಲ್ಲೆಯ ಹಿರಿಯ ಪ್ರಾಥಮಿಕ ಹಾಗೂ ಕಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಶೌಚಾಲಯದ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
ಆ) ಬಂದಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮವೇನು?